

ಪ್ರಕೃತಿ ವಿಕೋಪ, ಅಂಗಾಂಗ ಕಸಿಯ ಅಗತ್ಯ ಸಂದರ್ಭ, ಅಪಘಾತ, ಗಲಭೆ ಮುಂತಾದ ತುರ್ತು ಸಂದರ್ಭಗಳಲ್ಲಿ ಮಾತ್ರವಲ್ಲದೆ ಹೃದಯಾಘಾತ, ಶ್ವಾಸಕೋಶ ವೈಫಲ್ಯಗಳಂತಹ ಸನ್ನಿವೇಶಗಳಲ್ಲಿ ಏರ್ ಆ್ಯಂಬುಲೆನ್ಸ್ ಮೂಲಕ ವೇಗವಾಗಿ ಚಿಕಿತ್ಸೆಗೆ ಆಸ್ಪದ ಮಾಡಿಕೊಡುವ ಐಕ್ಯಾಟ್ ಸಂಸ್ಥೆ, ಭಾರತದಲ್ಲಿ ಮಾದರಿಯಾಗಿದೆ. ಇದರ ರೂವಾರಿ ಡಾ. ಶಾಲಿನಿ ನಾಲ್ವಾಡ್ ಹಾಗೂ ತಂಡ. ಜೀವ ಪಣಕ್ಕಿಟ್ಟು ಮಾಡುವ ವೈದ್ಯಕೀಯ ಸೇವೆಯಿಂದ 'ಆಪದ್ಬಾಂಧವ' ಎನಿಸಿಕೊಂಡಿದ್ದಾರೆ.

■ ಉಮಾ ವೇಣೂರು

# ತುರ್ತುಚಿಕಿತ್ಸೆಗೆ ಹೊಸ ಭಾಷ್ಯ ಬರೆದ ಶಾಲಿನಿ



**ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ 2026**
**ಗಿವ್ ಟು ಗೇನ್**

ಯಾವುದೇ ತುರ್ತು ಸಂದರ್ಭ ಇರಲಿ, ನಕ್ಸಲೀಯರ ದಾಳಿಯಲ್ಲಿ ಜನ ನಲುಗುತ್ತಿರಲಿ, ಪ್ರಕೃತಿ ವಿಕೋಪ ಸಂಭವಿಸಿ ಜನ ತತ್ತರಿಸುತ್ತಿರಲಿ, ಹೃದಯಾಘಾತವಾಗಿ ರೋಗಿ ಸಾವು ಬದುಕಿನೊಂದಿಗೆ ಹೋರಾಡುತ್ತಿರಲಿ, ಅಂಗಾಂಗ ಕಸಿಗಾಗಿ ತುರ್ತು ಚಿಕಿತ್ಸೆಯ ಅಗತ್ಯದ ಸಂದರ್ಭವಿರಲಿ, ಯುದ್ಧದಲ್ಲಿ ಗಾಯಾಳುಗಳು ಒದ್ದಾಡುತ್ತಿರಲಿ... ಇಂತಹ ಸಮಯದಲ್ಲಿ ಬೇಕಾಗಿರುವುದು ಜೀವ ಉಳಿಸುವ ತುರ್ತುಚಿಕಿತ್ಸೆ. ತಮ್ಮ ಪ್ರಾಣವನ್ನೂ ಲೆಕ್ಕಿಸದೆ, ಜೀವವನ್ನು ಪಣಕ್ಕಿಟ್ಟು, ಸಾವಿನಂಚಿನಲ್ಲಿರುವ ಜೀವವನ್ನು ಉಳಿಸಿದ ಮಂಡ್ಯದ ಹೆಣ್ಣುಮಗಳು ಡಾ. ಶಾಲಿನಿ ನಾಲ್ವಾಡ್, ಏರ್ ಆ್ಯಂಬುಲೆನ್ಸ್ ಸಂಸ್ಥೆ ಸ್ಥಾಪಿಸಿ, ಸಾವು ಬದುಕಿನ ಮಧ್ಯೆ ಹೋರಾಡುತ್ತಿದ್ದ ನೂರಾರು ಜೀವಗಳನ್ನು ಉಳಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಜಾಗತಿಕ ಮಟ್ಟದಲ್ಲಿ ಸಾಧನೆಯ ಶಿಖರಕ್ಕೇರಿದ್ದಾರೆ.

ಬೆಂಗಳೂರಿನಲ್ಲಿ ಐಕ್ಯಾಟ್ (**ICAT Air Ambulance**) ಸಂಸ್ಥೆ ಆರಂಭಿಸಿದವರು. ಹೈದರಾಬಾದ್, ದೆಹಲಿ, ದುಬೈ, ಅಬುದಾಬಿಗಳಲ್ಲಿ ಈ ಸಂಸ್ಥೆಯ ಶಾಖೆಗಳಿವೆ. ವಿಶ್ವದಾದ್ಯಂತ ತುರ್ತುಚಿಕಿತ್ಸೆಯ ಅಗತ್ಯ ಇರುವವರಿಗೆ ಹೆಲಿಕಾಪ್ಟರ್ ಮೂಲಕ ಅತ್ಯಂತ ಶೀಘ್ರವಾಗಿ ಆಸ್ಪತ್ರೆಗೆ ತಲುಪಿಸುವ ವ್ಯವಸ್ಥೆ ಮಾಡುತ್ತದೆ ಡಾ. ಶಾಲಿನಿ ತಂಡ.

'ಇದುವರೆಗೆ 2600 ರೋಗಿಗಳಿಗೆ ಏರ್ ಆ್ಯಂಬುಲೆನ್ಸ್ ಮೂಲಕ ಚಿಕಿತ್ಸೆ ಕೊಡಿಸಿದ್ದೇವೆ' ಎನ್ನುವ ಡಾ. ಶಾಲಿನಿ ತಮ್ಮ ಬದುಕಿನ ಕೆಲವು ರೋಚಕ ಘಟನೆಗಳನ್ನು 'ಸುಧಾ' ಓದುಗರಿಗಾಗಿ ನೀಡಿದ್ದಾರೆ.

ಮೈಸೂರಿನ ಜೆಎಸ್ಎಸ್ ಕಾಲೇಜಿನಲ್ಲಿ ಎಂಬಿಬಿಎಸ್ ಓದಿದ ಮೇಲೆ. ಮುಂದೆ ಉನ್ನತ ವ್ಯಾಸಂಗಕ್ಕಾಗಿ ಇಂಗ್ಲೆಂಡ್‌ಗೆ ತೆರಳಿ ಅನಸ್ತೇಷಿಯಾದಲ್ಲಿ ಸ್ನಾತಕೋತ್ತರ ಪದವಿ ಪಡೆದ ಬಳಿಕ ಉತ್ತಮ ಕೆಲಸಕ್ಕೂ ಸೇರಿದೆ. ಅಲ್ಲಿರುವಾಗಲೇ 'ಏರ್ ಆ್ಯಂಬುಲೆನ್ಸ್' ಬಗ್ಗೆ ತುಂಬ ಆಸಕ್ತಿ ಬೆಳೆಸಿಕೊಂಡೆ. ಅಲ್ಲೇ ಇದಕ್ಕೆ ಸಂಬಂಧಿಸಿದ ತರಬೇತಿಯನ್ನೂ ಪಡೆದೆ. ಇಂಗ್ಲೆಂಡ್‌ನಲ್ಲಿ ಏರ್ ಆ್ಯಂಬುಲೆನ್ಸ್ ಸೇವೆ ಕಳೆದ ಹಲವಾರು ವರ್ಷಗಳಿಂದ ಇದೆ. ನಮ್ಮ ದೇಶದಲ್ಲಿ ಈ ಸೇವೆಯೇ ಇಲ್ಲ. ಭಾರತದಲ್ಲಿ ಆಸ್ಪತ್ರೆಗಳು ಸುಸಜ್ಜಿತವಾಗಿವೆ. ಚಿಕಿತ್ಸೆಗಳೂ ಲಭ್ಯ. ಆದರೆ ಅಪಘಾತ, ಪ್ರಕೃತಿ ವಿಕೋಪದಂಥ ಸಂದರ್ಭದಲ್ಲಿ ತುರ್ತುಚಿಕಿತ್ಸೆ ಪಡೆಯಬೇಕಾದರೆ ಬಹಳ ಕಷ್ಟಪಡಬೇಕಾಗುತ್ತದೆ. ಎಷ್ಟೋ ಮಂದಿ ಸರಿಯಾದ ಸಮಯಕ್ಕೆ ಚಿಕಿತ್ಸೆ ಪಡೆಯಲಾಗದೆ ರಸ್ತೆಯಲ್ಲೇ ಪ್ರಾಣಬಿಡುವ ಪ್ರಸಂಗ ಒದಗಿಬರುತ್ತದೆ. ಹಾಗಾಗಿ ನಮ್ಮ ದೇಶದಲ್ಲಿ ಏರ್ ಆ್ಯಂಬುಲೆನ್ಸ್ ಸೇವೆ ಆರಂಭಿಸಬೇಕು ಎಂಬ ಆಲೋಚನೆ ಹೊಳೆಯಿತು, ಇದರ ಪ್ರತಿಫಲವೇ 2017ರಲ್ಲಿ ಸ್ಥಾಪನೆಯಾದ **ICATT (International Crucial Care Air Transfer Team).**

ಏರ್ ಆ್ಯಂಬುಲೆನ್ಸ್ ಆರಂಭದ ಮುನ್ನ ಎರಡು ವರ್ಷ ಈ